ಒ.ಎಸ್. ನಂಬರ್ಃ 114/2018
ಪಿಡಬ್ಲ್ಯೂಃ 1
ದಿನಾಂಕಃ 05.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಚ್ ವಕೀಲರಿಂದಃ

ಸಾಕ್ಷಿಗೆ 6 ಪೊಟೋಗಳನ್ನು ತೋರಿಸಿ ಅದರಲ್ಲಿ ಕಾಣುತ್ತಿರುವುದೇ ದೇವಸ್ಥಾನ ಎಂದು ಕೇಳಲಾಗಿ ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ಸದರಿ 6 ಪೋಟೋಗಳನ್ನು ನಿಡಿ 2 ರಿಂದ 7 ಎಂದು ಗುರುತಿಸಲಾಯಿತು. ಸದರಿ ದೇವಸ್ಥಾನ 1945 ರಲ್ಲಿ ಕಟ್ಟಿಸಿದಂತಹ ದೇವಸ್ಥಾನ ಎಂದರೆ ಸರಿ. ಆ ದೇವಸ್ಥಾನ ಪಾಪೇಗೌಡರು ಮತ್ತು ಅರಸೇಗೌಡರು ಕಟ್ಟಿಸಿದಂತಹ ದೇವಸ್ಥಾನ ಎಂದರೆ ಸರಿ . 2010 ರಲ್ಲಿ ಸದರಿ ದೇವಸ್ಥಾನವನ್ನು ಸಣ್ಣ ಪುಟ್ಟ ರಿಪೇರಿ ಮಾಡಲಾಗಿರುತ್ತದೆ ಎಂದರೆ ಸರಿ . ನಿಪಿ 3 ರಲ್ಲಿ ಕಾಣಿಸುತ್ತಿರುವ ವ್ಯಕ್ತಿಗಳು ಅರಸೇಗೌಡ ಮತ್ತು ಪಾಪೇಗೌಡರ ವಾರಸುದಾರರ ಎಂದರೆ ಅಲ್ಲ , ಸಂಬಂಧಿಕರು ಎನ್ನುತ್ತಾರೆ . ಅರಸೇಗೌಡ ಮತ್ತು ಪಾಪೇಗೌಡರು ಅಣ್ಣ ತಮ್ಮಂದಿರು ಅಂದರೆ ಸರಿ . ಪ್ರತಿವಾದಿಗಳು ಅವರ ಮೊಮ್ಮಕ್ಕಳು ಎಂದರೆ ಸರಿ . ನಿಪಿ 3 ಮತ್ತು 4 ರಲ್ಲಿ ಕಾಣಿಸುತ್ತಿರುವ ಎಲ್ಲಾ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರನಾಗಿ ಮಾಡಿಲ್ಲ ಎಂದರೆ ಅರಸೇಗೌಡ , ಲಕ್ಷ್ಮಣ ಮತ್ತು ಕೃಷ್ಣಪ್ಪ ತೀರಿಕೊಂಡಿರುತ್ತಾರೆ ಆದ ಕಾರಣ ಪಕ್ಷಗಾರನಾಗಿ ಮಾಡಿಲ್ಲ ಎನ್ನುತ್ತಾರೆ . ಅವರಿಗೆ ಹೆಂಡತಿ ಮಕ್ಕಳು ಇದ್ದಾರೆ ಎಂದರೆ ಸರಿ. ನಿಪಿ 3 ಮತ್ತು 4 ನ್ನು ಪಂಚಾಯಿತಿಯವರು ಅದರಲ್ಲಿ ತೋರಿಸಿರುವ ವ್ಯಕ್ತಿಗಳ ಸ್ವತ್ತಿನ ಮೇಲೆ ಸ್ವಾದೀನವನ್ನು ಪರಿಶೀಲನೆ ಮಾಡಿ ನೀಡಿರುತ್ತಾರೆ ಎಂದರೆ ಯಾವುದೇ ಪರಿಶೀಲನೆ ಮಾಡದೇ ಆ ರೀತಿ ಆ ಖಾತೆ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ .

ನಿಪಿ 3 ಮತ್ತು 4 ಸರಿ ಇಲ್ಲ ಎಂದು ಅವುಗಳನ್ನು ಪ್ರಶ್ನಿಸಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ನಿಪಿ 3 ಮತ್ತು 4 ನ್ನು ನಾನು ಪಂಚಾಯಿತಿಯಿಂದ ಪಡೆದಿರುತ್ತೇನೆ. ನಿಪಿ 3 ಮತ್ತು 4 ರ ಬಗ್ಗೆ ಪಂಚಾಯಿತಿಯಲ್ಲಿ ನಮೂದು ಇದ್ದು ನಮ್ಮ ಸ್ವಾಧೀನದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದು ನಿಪಿ 2 ನ್ನು ಪಂಚಾಯಿತಿಯವರು ನೀಡಿರುತ್ತಾರೆ ಎಂದರೆ ಸರಿ . ನಿಪಿ 1 ಮತ್ತು 5 ಒಂದೇ ದಾಖಲೆ ಎಂದರೆ ಸರಿ . ನಿಪಿ 6 ನ್ನು ನನಗೆ ಮೈಸೂರಿನ ಸಂಸ್ಕೃತ ಕಾಲೇಜಿನಲ್ಲಿ 2012 ರಲ್ಲಿ ನೀಡಿರುತ್ತಾರೆ . ನನಗೆ ಸಂಸ್ಕೃತ ಬರುವುದಿಲ್ಲ , ಮಂತ್ರಗಳು ಬರುವುದಿಲ್ಲ , ಪೂಜೆ ಮಾಡುವ ವಿಧಾನವು ತಿಳಿದಿಲ್ಲ ಎಂದರೆ ಸರಿಯಲ್ಲ . ನಾನು ಚಾಲಕ

ವೃತ್ತಿಯನ್ನು ಮಾಡುತ್ತೇನೆ, ಅರ್ಚಕನ ಕೆಲಸವನ್ನು ಎಂ ದಿಗೂ ಮಾಡಿಲ್ಲ ಎಂದರೆ ಸರಿಯಲ್ಲ . ನಿಪಿ 6 ನ್ನು ಈ ದಾವೆಗಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ದೇವಸ್ಥಾನದಲ್ಲಿ ನರಸಿಂಹಪ್ಪ , ನೇರಳಕೆರೆಯವರು ಅರ್ಚಕರಾಗಿದ್ದು ನಾನಾಗಲೀ ಮತ್ತು ನಮ್ಮ ಕುಟುಂಬಸ್ಥರಾಗಲೀ ಎಂದಿಗೂ ಸಹ ದೇವಸ್ಥಾನದಲ್ಲಿ ಅರ್ಚಕರ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ . ಪ್ರಸುತ್ತ ದೇವಸ್ಥಾನದಲ್ಲಿ ಕೋಲಾರದ ಶೇಷಾದ್ರಿ ಎನ್ನುವವರು ಅರ್ಚಕರಾಗಿರುತ್ತಾರೆ ಎಂದರೆ ಸರಿ . ಅವರು ನನ್ನ ತಮ್ಮ ಎನ್ನುತ್ತಾರೆ .ಅವರು ನನ್ನ ತಮ್ಮ ಅಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿಪಿ 7 ಊರ ನಕಾಶೆಯಾಗಿದ್ದು ಅದರಲ್ಲಿ ಹಳಿಗಾನಹಳ್ಳಿ ಬಗ್ಗೆ ನಮೂದು ಇದೆ ಎಂದರೆ ಸರಿ . ನಿಪಿ 7 ರಲ್ಲಿ ಬಂಗಾರಪೇಟೆ ಹೋಬಳಿ ಎಂದು ಎಲ್ಲೂ ಉಲ್ಲೇಖ ಇಲ್ಲ ಎಂದರೆ ಬೇತಮಂಗಲ ತಾಲ್ಲೂಕು ಇದ್ದಾಗ ಬಂಗಾರಪೇಟೆ ಹೋಬಳಿ ಇತ್ತು ಎನ್ನುತ್ತಾರೆ. ಹಳಿಗಾನಹಳ್ಳಿ ಯೇ ಬೇರೆ ಅನಿಗಾನಹಳ್ಳಿ ಯೇ ಬೇರೆ ಎಂದರೆ ಈಗ ಹಲಿಗಾನಹಳ್ಳಿ ಆಗಿರುತ್ತದೆ ಎನ್ನುತ್ತಾರೆ . ಅದು ಯಾವಾಗ ಬದಲಾವಣಿ ಆಗಿರುತ್ತದೆ ಎಂದರೆ 1961 ರಲ್ಲಿ ಎನ್ನುತ್ತಾರೆ . ಆ ರೀತಿ ಬದಲಾವಣೆ ಆದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿ .

ಬೇತಮಂಗಲ ತಾಲ್ಲೂಕು , ಬಂಗಾರಪೇಟೆ ತಾಲ್ಲೂಕು ಇತ್ತು ಎನ್ನುವ ಬಗ್ಗೆ ನಾನು ದಾಖಲೆ ನೀಡಿಲ್ಲ ಎಂದರೆ ಸರಿ . ಪ್ರತಿವಾದಿಗಳು ಏನೆಂದು ತಕಾರಾರು ಸಲ್ಲಿಸಿ ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎನ್ನುವ ಬಗ್ಗೆ ತಿಳಿದುಕೊಂಡಿರುತೇನೆ ಎಂದರೆ ತಿಳಿದುಕೊಂಡಿರುತ್ತೇನೆ ಎನ್ನುತ್ತಾರೆ . ದಾವಾ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ಯಾವುದೇ ಇನಾಮತಿ ಜಮೀನು ಮಂಜೂರಾದ ಬಗ್ಗೆ ಬೆಂಗಳೂರಿನ ಭೂ ಮಾಪಕರ ಕಚೇರಿಯಲ್ಲಿ ದಾಖಲೆಗಳು ಇಲ್ಲ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ . ನಾನು ಸರ್ವೆ ನಂಬರ್ 59 ರ ಮೇಲೆ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ . ಅದು ಎಷ್ಟು ಎಕರೆ ಇದೆ ಎಂದರೆ 2 ಎಕರೆ 6 ¼ ಗುಂಟೆ ಇದೆ ಎನ್ನುತ್ತಾರೆ . ಸರ್ವೆ ನಂಬರ್ 59 ಕೇವಲ 32 ಗುಂಟೆ ಅದರಲ್ಲಿ 1 ಗುಂಟೆ ಕರಾಬು ಮಾತ್ರ ಇದೆ ಎಂದರೆ ಸರಿಯಲ್ಲ . ನಾನು ಹೇಳಿದಂತೆ 2 ಎಕರೆ 6 ¼ ಗುಂಟೆ ಇಲ್ಲ ಎಂದರೆ ಇದೆ , ಆ ಬಗ್ಗೆ ದಾಖಲೆ ನೀಡುತ್ತೇನೆ ಎನ್ನುತ್ತಾರೆ. ಸರ್ವೆ ನಂಬರ್ 59 ನೀರಗಂಟಿ ಇನಾಮಿತಿ ಜಮೀನು , ಅದು 1981-82 ರಲ್ಲಿ ಸಾದಪ್ಪ , ದೊಡ್ಡ ಮುನಿವೆಂಕಟಪ್ಪ ಮತ್ತು ಚಿಕ್ಕ ಮುನಿಯಪ್ಪನಿಗೆ ಮಂಜೂರಾದ ಜಮೀನು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಮೇಲೆ ಹೇಳಿದ ಮೂರು ಜನರ ವಂಶಸ್ಥರೇ ಈಗಲೂ ಸಹ ಆ ಜಮೀನಿನಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ

ಎನ್ನುತ್ತಾರೆ. ಸದರಿ ಸರ್ವೆ ನಂಬರ್ 59 ರಲ್ಲಿ ನಮಗಾಗಲೀ , ಪ್ರತಿವಾದಿಗಳಿಗಾಗಲೀ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ . ಸರ್ವೆ ನಂಬರ್ 59, 66, ಮತ್ತು 88 ರ ಮೇಲೆ ಈ ದಾವೆಯನ್ನು ಹೂಡಲಾಗಿದೆ . ಅನಿಗಾನಹಳ್ಳಿ ಯಲ್ಲಿ ಸರ್ವೆ ನಂಬರ್ 88 ಅಸ್ತಿತ್ವದಲ್ಲೇ ಇಲ್ಲ ಎಂದರೆ ಸರಿಯಲ್ಲ . ಸರ್ವೆ ನಂಬರ್ 66, 6 ಗುಂಟೆ ಇದೆ . ಅದು ಯಾರ ಹೆಸರಿನಲ್ಲಿ ಇದೆ ಎಂದರೆ ಮುನಿಸ್ವಾಮಿಗೌಡ ಮತ್ತು ದೇವರ ಇನಾಂತಿ ಎಂದು ಉಲ್ಲೇಖ ಇದೆ ಎನ್ನುತ್ತಾರೆ . ನಾನು ಸರ್ವೆ ನಂಬರ್ 66 ರ ಮೇಲೆ ದಾವೆ ಹೂಡಿಲ್ಲ ಎಂದರೆ ಸರಿಯಲ್ಲ . ದೇವಸ್ಥಾನದ ಕರೆಂಟ್ ಬಿಲ್ ಪ್ರತಿವಾದಿಗಳ ಹೆಸರಿನಲ್ಲಿ ಇದೆ ಎಂದರೆ ಅವರೇ ಮಾಡಿಸಿ ಕೊಂಡಿರುತ್ತಾರೆ ಎನ್ನುತ್ತಾರೆ. ದೇವಸ್ಥಾನಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ , ಅದು ಪ್ರತಿವಾದಿಗಳಿಗೆ ಸಂಬಂಧಿಸಿದ್ದು ಅದು ಅವರ ಸ್ವಂತ ಆಸ್ತಿಯಲ್ಲಿ ದೇವಸ್ಥಾನವನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ದೇವಸ್ಥಾನಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ ಆದರೂ ಕೂಡ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಪೊಲೀಸ್ ಕಂಪ್ಲೇಂಟ್ ಕೊಟ್ಟ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ನೀಡಿರುತ್ತೇನೆಯೇ ಅಂದರೆ ಇಲ್ಲ , ಮುಂದಿನ ಮುದ್ದತಿಗೆ ನೀಡುತ್ತೇನೆ ಎನ್ನುತ್ತಾರೆ . ನಾನು ಹೇಳಿದಂತೆ ಯಾವುದೇ ಗಲಾಟೆ ಆಗಿಲ್ಲ , ಅದ ಕಾರಣ ಕಂಪ್ಲೇಂಟ್ ನೀಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ . ನಾನು ಅನಿಗಾನಹಳ್ಳಿ ನಿವಾಸಿ ಅಲ್ಲ , ಆದ ಕಾರಣ ಪ್ರತಿವಾದಿಗಳು ಗಲಾಟೆ ಮಾಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿಗಳ ವಿರುದ್ದ ಸಲ್ಲಿಸಿದ ಮಧ್ಯಂತರ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ ಅರ್ಜಿ ವಜಾ ಆಗಿದ್ದು ಅದನ್ನು ನಾನು ಪ್ರಶ್ನಿಸಿಲ್ಲ ಎಂದರೆ ಅದು ವಜಾ ಆಗಿಲ್ಲ ಎನ್ನುತ್ತಾರೆ .

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**(ರಹೀಮ್ ಅಲಿ ಎಮ್ ನದಾಫ್)**
**ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ**
**ಕೆಜಿಎಫ್ (ಸಂಚಾರಿ ಪೀಠ ಬಂಗಾರಪೇಟೆ).**